**IN THE COURT OF I ADDL. CIVIL JUDGE & JMFC**
**AT BELGAUM**

**(PRESENTED OVER BY SRI.PRAVEEN NAYAK)**

**O.S./0001316/2014**

**APPELLANTS :**

1. Shri. Pandurang S/o. Krishnaji Patil
Maruti Galli, Jaffarwadi, Kadoli, Tal/Dsit Belgaum.

VERSUS

**RESPONDENTS :**

1. Shri. Narayan S/. Basawant Patil
Main Road, Jaffarwadi Kadoli, Tal/Dist Belgaum.
2. Smt. Sunita W/o. Gajanan Patil
Kalkhamb Astha Village, Tal/Dist Belgaum.
3. Smt. Kalpana W/o. Ashok Kalkhambkar
Kalhamb Astha Village, Tal/Dist Belgaum.
4. Shri. Suresh Krishnaji Patil
Main Road, Jaffarwadi, Kadoli, Tal/Dist Belgaum.
5. Shri. Monappa Krishnaji Patil
TIT Road, Near Parwati Garden, Kolhapur, Dist Kolhapur, Maharashtra.

---------------------------------------------------------------------------
R.A.Chachadi, Advocate for the appellant.
---------------------------------------------------------------------------

**ಪ್ರಮಾಣ ವಚನ ಬೋಧಿಸಿದ ತಾಃ 21-04-2016**

**ಮುಂದುವರೆದ ಪಾಟೀ ಸವಾಲು ಃ ಶ್ರೀ ಎ ಎಂ ಪಿ ವಕೀಲರಿಂದ**

**1981 ರಲ್ಲಿ ದಾವಾ ಸ್ವತ್ತನ್ನು ಖರೀದಿಸಿದ ನಂತರ ನನ್ನ ಹೆಸರು ದಾಖಲೆಗಳಲ್ಲಿ ನಮೂದು ಆಗಿರುತ್ತದೆ. ನಾನು ನಿವೃತ್ತಿ ಹೊಂದಿದ ನಂತರ ಒಟ್ಟು ಕುಟುಂಬವನ್ನು ಇತರರ ಜೊತೆಗೆ ನಡೆಸುತ್ತಿದ್ದೆನು ಎಂದರೆ ಸರಿಯಲ್ಲ. ನಾನು ಮನೆಯ ಮುಖ್ಯಸ್ಥನಾಗಿರುವುದರಿಂದ ನನ್ನ ಸಹೋದರರೆಲ್ಲರೂ ಸೇರಿ ದಾವಾ**

ಸ್ವತ್ತನ್ನು ಖರೀದಿಸಿದ್ದರು ಎಂದರೆ ಸರಿ ಅಲ್ಲ. ಪ್ರತಿವಾದಿಗಳು ಹಾಗೂ ನಾನು ಒಟ್ಟಿಗೆ ಸೇರಿ ದಾವಾ ಸ್ವತ್ತನ್ನು ಖರೀದಿಸಿದ್ದೆವು ಎಂದರೆ ಸರಿಯಲ್ಲ. ದಿನಾಂಕ 03-10-1999 ರಂದು ನಾನು ತಹಶೀಲ್ದಾರ ಅವರಿಗೆ ನನ್ನ ಹಾಗೂ ನನ್ನ ಸಹೋದರರ ಹೆಸರನ್ನು ದಾಖಲೆಗಳಲ್ಲಿ ನಮೂದಿಸುವಂತೆ ಅರ್ಜಿ ಸಲ್ಲಿಸಿದ್ದೆನು ಎಂದರೆ ಸರಿಯಲ್ಲ. ಈಗ ಒಂದು ಡೈರಿಯ ನಕಲನ್ನು ತೋರಿಸಲು ಸಾಕ್ಷಿದಾರ ತನಗೆ ಕನ್ನಡ ಬರುವುದಿಲ್ಲ ಎಂದು ನುಡಿಯುತ್ತಾರೆ. ಸದ್ರಿ ಡೈರಿ ಸಂಖ್ಯೆ 1079 ರಲ್ಲಿ ನಾನು ಹಾಗೂ ನನ್ನ ಸಹೋದರರ ಹೆಸರು ನಮೂದು ಆಗಿರುತ್ತದೆ ಎಂದರೆ ಸದ್ರಿ ಡೈರಿ ನನಗೆ ಗೊತ್ತಿಲ್ಲದೇ ನಮೂದಿಸಿಕೊಂಡಿರುತ್ತಾರೆ. ಆರ್ ಟಿ ಎಸ ಸಂಖ್ಯೆ 25ಃ 80ಃ 86 ನಾನು ಎನ್ ಓ ಸಿ ಯನ್ನು ನೀಡಿದ್ದೆನು ಎಂದರೆ ಸರಿಯಲ್ಲ. ದಿನಾಂಕ 05-01-2001 ರಂದು ರೆವೆನ್ಯೂ ಇನಸ್ಪೆಕ್ಟರ ಅವರು ಸದ್ರಿ ಡೈರಿಯನ್ನು ಸರ್ಟಿಫೈ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ತದನಂತರ ಉತಾರೆಯಲ್ಲಿ ನನ್ನ ಹಾಗೂ ನನ್ನ ಸಹೋದರರ ಹೆಸರು ನಮೂದು ಆಗಿರುತ್ತದೆ ಎಂದರೆ ಸರಿಯಲ್ಲ.  ಆ ಸಮಯದಲ್ಲಿ 5 ನೇ ಪ್ರತಿವಾದಿಯ ಹೆಸರು ಬಾಕಿ ಉಳಿದಿದ್ದು ಅದರ ನಂತರ ನಾನು ಪುನಃ ಅರ್ಜಿ ಸಲ್ಲಿಸಿ ಅವರ ಹೆಸರನ್ನು ನಮೂದು ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಅದರ ಬಗ್ಗೆ ಡೈರಿ ಸಂಖ್ಯೆ 921 ಆಗಿರುತ್ತದೆ ಎಂದರೆ ಸಾಕ್ಷಿದಾರರು ಕೊಟ್ಟಿದಾಖಲೆಗಳನ್ನು ಸೃಷ್ಟಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಈ ದಾವೆಯನ್ನು ಹೂಡುವ ಪೂರ್ವದಲ್ಲಿ ನಾನು ದಾವಾ ಸ್ವತ್ತಿನ ಉತಾರೆಯನ್ನು ತೆಗೆದು ನೋಡಿ ಆಗ ಪ್ರತಿವಾದಿಗಳ ಹೆಸರು ದಾಖಲಾಗಿರುವದನ್ನು ನೋಡಿದ ನಂತರ ಈ ದಾವೆಯನ್ನು ಹೂಡಿರುತ್ತೇನೆ. 1981 ರಿಂದ ನಾನು ಕೃಷಿ ಭೂಮಿಗೆ ಹೋಗಿ ಬರುವುದನ್ನು ಮಾಡುತ್ತಿದ್ದೇನೆ.      1981 ರಿಂದ ಇವರೆಗೆ ನಾನು ಸುಮಾರು 5-6 ಸಾರಿ ಉತಾರೆಯನ್ನು ತೆಗೆದು ನೋಡಿರುತ್ತೇನೆ. ಉತಾರೆಯು ಕನ್ನಡದಲ್ಲಿರುವುದರಿಂದ ನನಗೆ ಓದಲು ಬರುವುದಿಲ್ಲ. 1981 ರ ನಂತರವು ಮರಾಠಿಯಲ್ಲಿ ಉತಾರೆ ಇತ್ತು ಎನ್ನಲು ಸಾಕ್ಷಿದಾರರು ಆ ಸಮಯದಲ್ಲಿ ನಾನು ಉತಾರೆಯನ್ನು ತೆಗೆದು ನೋಡಿರುವದಿಲ್ಲ ಅದರ ಅವಶ್ಯಕತೆ ಇರಲಿಲ್ಲ ಎಂದು ನುಡಿಯುತ್ತಾರೆ. 1981 ರಲ್ಲಿ ದಾವಾ ಸ್ವತ್ತನ್ನು ಖರೀದಿಸಿ 1982 ರಲ್ಲಿ ಮೋಟರ ಅನ್ನು ಸಹ ಕೂಡಿಸಿರುತ್ತೇನೆ. ಮೋಟರ ನನ್ನ ಹೆಸರಿನಲ್ಲಿ ಇರುತ್ತದೆ. ಆ ಸಮಯದಲ್ಲಿ ಮೊಟರ ಬಿಲ್ಲು ಮಾಫಿ ಆಗುತ್ತಿತ್ತು ಎಂದರೆ ಸರಿಯಲ್ಲ. ಮೋಟರ ಬಿಲ್ಲನ್ನು ಮಾಪಿ ಮಾಡಿಸಿಕೊಳ್ಳಲು ದಾವಾ ಸ್ವತ್ತಿನ ಉತಾರೆಯನ್ನು ನಾನು ಹಾಜರಪಡಿಸಿರಲಿಲ್ಲ. ಮೋಟರ ಬಿಲ್ಲುಗಳನ್ನು ಹಾಜರುಪಡಿಸಲು ಯಾವ ತೊಂದರೆ ಇದೆ ಎಂದು ಕೇಳಲು ಸಾಕ್ಷಿದಾರರು ಸದ್ರಿ ಬಿಲ್ಲುಗಳನ್ನು ನಾನು

ಹುಡುಕಬೇಕು ಎಂದು ನುಡಿಯುತ್ತಾರೆ. ಸದ್ರಿ ಬಿಲ್ಲುಗಳು ದೊರೆತಲ್ಲಿ ನಾನು ಹಾಜರಪಡಿಸುತ್ತೇನೆ. 1981 ರಿಂದ 25 ರಿಂದ 30 ವರ್ಷದವರೆಗೆ ನಾನು ಹಾಗೂ ನನ್ನ ಸಹೋದರರ ಹೆಸರುಗಳು ದಾವಾ ಸ್ವತ್ತಿನ ಉತಾರೆಗಳಲ್ಲಿ ದಾಖಲಾಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಈಗಲೂ ಸದ್ರಿ ಅವರ ಹೆಸರು ಪಹಣಿ ಪತ್ರಿಕೆಗಳಲ್ಲಿ ಕಂಡುಬರುತ್ತದೆ ಎಂದರೆ ಸರಿ. ದಾವಾ ಸ್ವತ್ತಿನ ಪಹಣಿ ಪತ್ರಿಕೆಗಳಲ್ಲಿ ನನ್ನ ಸಹೋದರರ ಹೆಸರು ನಮೂದಾಗಿರುವುದು ನನಗೆ ತಿಳಿದು ಬಂದರು ಎಷ್ಟು ವರ್ಷ ಆಯಿತು ಎಂದು ನನಗೆ ಹೇಳಲು ಬರುವುದಿಲ್ಲ. ದಾವಾ ಸ್ವತ್ತಿನ ಪಹಣಿ ಪತ್ರಿಕೆಯನ್ನು ನಮ್ಮ ವಕೀಲರಿಗೆ ನಾನು ತೋರಿಸಿರುತ್ತೇನೆ. ಪ್ರತಿವಾದಿಗಳು ತಮ್ಮ ಹೆಸರನ್ನು ಕೊಟ್ಟಿಯಾಗಿ ನಮೂದಿಸಿಕೊಂಡಿರುತ್ತಾರೆ ಎಂದು ನಮ್ಮ ವಕೀಲರಿಗೆ ತಿಳಿಸಿರುತ್ತೇನೆ. ಈ ವಿಷಯ ತಿಳಿದು ನಂತರ ನಾನು ರೆವೆನ್ಯೂ ಅಧಿಕಾರಿಗಳ ಬಳಿ ಯಾವುದೇ ತಕರಾರನ್ನು ಮಾಡಿರುವದಿಲ್ಲ. ಆರ ಟಿ ಎಸ ಪ್ರಕರಣವನ್ನು ಹೂಡಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿದಾರರು ತಾನು ಅಶಿಕ್ಷಿತನಾಗಿರುವುದರಿಂದ ಅದು ಸಾಧ್ಯವಾಗಲಿಲ್ಲ ಎಂದು ನುಡಿಯುತ್ತಾರೆ. ನಾನು ಸ್ವತಃ ಪ್ರತಿವಾದಿಗಳ ಹೆಸರನ್ನು ದಾಖಲೆಗಳಲ್ಲಿ ನಮೂದು ಮಾಡಲು ಅರ್ಜಿ ಸಲ್ಲಿಸಿದ್ದು ಈಗ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮ್ಮತಿ ಪತ್ರ ಹಾಜರುಪಡಿಸಿದ ನಂತರವೇ ಪ್ರತಿವಾದಿಗಳ ಹೆಸರನ್ನು ನಮೂದಿಸಿಕೊಳ್ಳಲಾಯಿತು ಎಂದರೆ ಸರಿಯಲ್ಲ. 5 ನೇ ಪ್ರತಿವಾದಿಯ ಹೆಸರನ್ನು ನಮೂದಿಸಲು 20 ರೂ ಚಾಪಾ ಕಾಗದದ ಮೇಲೆ ಸಮ್ಮತಿ ಪತ್ರವನ್ನು ಜಾರಿ ಮಾಡಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದ್ರಿ ಸಮ್ಮತಿ ಪತ್ರದ ಪ್ರಕಾರ ಪ್ರತಿವಾದಿಗಳ ಹೆಸರು ನಮೂದು ಆಗಿರುತ್ತದೆ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನ ಸ್ವಾಧೀನವನ್ನು ನಾನು ಹಾಗೂ ಪ್ರತಿವಾದಿಗಳು ಜಂಟಿ ಆಗಿ ಹೊಂದಿರುತ್ತೇವೆ ಎಂದರೆ ಸರಿಯುಲ್ಲ. ನನ್ನ ಸಹೋದರ ಬಸವಂತ ಅವರು ಮರಣ ಹೊಂದಿರುತ್ತಾರೆ. ಬಸವಂತ ಅವರು ಮರಣ ಹೊಂದಿದ ನಂತರ ಅವರ ಪತ್ನಿ ಹಾಗೂ ಮಗನ ಹೆಸರು ದಾಖಲೆಗಳಲ್ಲಿ ದಾಖಲಾಗಿರುತ್ತದೆ ಎಂದರೆ ನನಗೆ ಮಾಹಿತಿ ಇಲ್ಲ. ಬಸವಂತ ಅವರು ಮರಣ ಹೊಂದಿ 2-3 ವರ್ಷ ಅಗಿರಬಹುದು. ಸದ್ರಿ ಡೈರಿಯನ್ನು ನಮೂದು ಮಾಡಿದ ನಂತರ ನಾನು ಯಾವುದೇ ತಕರಾರನ್ನು ಮಾಡಿರುತ್ತೇನೊ ಎಂದು ಕೇಳಲು ನನಗೆ ಅದರ ಬಗ್ಗೆ ಮಾಹಿತಿ ಇರಲಿಲ್ಲ ಹಾಗೂ ಸದ್ರಿ ಡೈರಿ ಕೊಟ್ಟಿಯಾಗಿರುತ್ತದೆ ಎಂದು

ನುಡಿಯುತ್ತಾರೆ. ಆ ಸಮಯದಲ್ಲಿ ನನಗೆ ನೋಟಿಸ ಜಾರಿ ಆಗಿರುತ್ತದೆ ಎಂದರೆ ಸರಿಯಲ್ಲ. ನನಗೆ ಅದರ ಬಗ್ಗೆ ಮಾಹಿತಿ ಇದ್ದರೂ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ದಾವಾ ಸ್ವತ್ತಿನ ಕಬ್ಜೆಯನ್ನು ಪ್ರತಿವಾದಿಗಳು ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿದಾರರು ತನ್ನ ಕಬ್ಜೆಯಲ್ಲಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನಲ್ಲಿ ವ್ಯವಸಾಯವನ್ನು ಎಲ್ಲರೂ ಸೇರಿ ಮಾಡುತ್ತೇವೆ ಎಂದರೆ ಸರಿಯಲ್ಲ. ಈಗ ನೀರಿನ ಮೋಟರ ಚಾಲ್ತಿಯಲ್ಲಿರುತ್ತದೆ. ಪ್ರತಿವಾದಿಗಳು ಬೇರೆ ಒಂದು ಮೊಟರಅನ್ನು ಹಾಕಿಕೊಂಡಿದ್ದರು ಎಂದರೆ ಸರಿ. ಈಗ ನಾನು ಸದ್ರಿ ಮೋಟರನ್ನು ಬಂದು ಮಾಡಿಸಿರುತ್ತೇನೆ. ಈಗಲು ಸಹ ಪ್ರತಿವಾದಿಗಳ ಮೋಟರ ಇದ್ದು ಅವರು ಶುಲ್ಕವನ್ನು ಪಾವತಿಸುತ್ತಿದ್ದಾರೆ ಎಂದರೆ ಸರಿಯಲ್ಲ. ಎಲ್ಲರೂ ಸೇರಿ ಬೆಳೆಯನ್ನು ಬೆಳೆಯುತ್ತಿದ್ದು ಕಟಾವನ್ನು ಸಹ ಮಾಡುತ್ತಾರೆ ಎಂದರೆ ಸಾಕ್ಷಿದಾರರು ತಾನು ಸ್ವತಃ ಮಾಡುತ್ತೇನೆ ಎಂದು ನುಡಿಯುತ್ತಾರೆ. ದಾವೆ ಹೂಡುವ ಪೂರ್ವದಲ್ಲಿ ನನಗೆ ಪ್ರತಿವಾದಿಗಳ ಹೆಸರು ನಮೂದು ಆಗಿರುವ ಬಗ್ಗೆ ಮಾಹಿತಿ ಇತ್ತು ಎಂದರೆ ಸರಿಯಲ್ಲ. ಪ್ರತಿವಾದಿಗಳು ದಾವಾ ಸ್ವತ್ತಿನ ಕಬ್ಜೆಯಲ್ಲಿದ್ದು ಅದರ ಮಾಲೀಕರಾಗಿರುವುದರಿಂದ ನಾನು ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

ಮುಂದುವರೆದ ವಿಚಾರಣೆ ಇಲ್ಲ.

(ತೆ. ನ್ಯಾ. ಸಾಕ್ಷಿಯ ಹೇಳಿಕೆಯ ಮೇ ರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿಯಿದೆ.

Sd/-

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ
ಮತ್ತು ಜೆಎಮ್ಎಫ್‌ಸಿ, ಬೆಳಗಾವಿ.